# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 213 |
| ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 13.09.2022 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ನಿಮಿತ್ತ ಪಾಲಿಸ್ಟರ್ ಧ್ವಜ ಬಳಕೆಗೆ ಅನುಮತಿ ನೀಡಿದ್ದರಿಂದ ಖಾದಿ ಗ್ರಾಮೋದ್ಯಮಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>
75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ನಿಮಿತ್ತ ಪಾಲಿಸ್ಟರ್ ಧ್ವಜ ಬಳಕೆಗೆ ಅನುಮತಿ ನೀಡಿದ್ದರಿಂದ ಖಾದಿ ಗ್ರಾಮೋದ್ಯಮಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಈ ಹಿಂದೆ ರಾಷ್ಟ್ರಧ್ವಜವನ್ನು ಕೈಯಿಂದಲೇ ನೇಯ್ದ ಮತ್ತು ನೂಲುವ ಷರತ್ತಿಗೆ ಒಳಪಟ್ಟು ಉಣ್ಣೆ, ಖಾದಿ ರೇಷ್ಮೆ ಖಾದಿ ದಾರದಿಂದ ತಯಾರಿಸಬಹುದಾಗಿತ್ತು. ಆದರೆ, Flag Code of India, 2002 ರ ಭಾಗ-1, ಕಂಡಿಕೆ 1.2ರನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಭಾರತ ಸರ್ಕಾರ ಆದೇಶಿಸಿರುತ್ತದೆ.
" 1.2 The National Flag of India shall be made of hand spun and hand woven or machine made, cotton/polyester/wool/silk khadi bunting"
ಈ ತಿದ್ದುಪಡಿಯನ್ವಯ, ಕೈಯಿಂದ ನೇಯ್ದ ಮತ್ತು ಯಂತ್ರದಿಂದ ನೇಯ್ದ ರಾಷ್ಟ್ರ ಧ್ವಜಗಳನ್ನು ತಯಾರಿಸಬಹುದಾಗಿದೆ ಹಾಗೂ ಹತ್ತಿ / ಪಾಲಿಯೆಸ್ಟರ್ / ಉಣ್ಣೆ / ರೇಷ್ಮೆ ಖಾದಿ ಬಂಟಿಂಗ್ ನಿಂದಲೂ ರಾಷ್ಟ್ರಧ್ವಜ ತಯಾರಿಸಬಹುದಾಗಿದೆ.
75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಭಾರತ ಸರ್ಕಾರವು "ಹರ್ ಘರ್ ತಿರಂಗ" ಅಭಿಯಾನದಲ್ಲಿ ರಾಷ್ಟ್ರದ ಪ್ರತಿ ಮನೆಯ ಮೇಲೆ ರಾಷ್ಟ್ರಧ್ವಜ ಹಾರಿಸಲು ಎಲ್ಲಾ ರಾಜ್ಯಗಳಿಗೂ ಸೂಚನೆ ನೀಡಿತ್ತು. ಅದರಂತೆ, ಭಾರತದಾದ್ಯಂತ ರಾಷ್ಟ್ರಧ್ವಜಕ್ಕೆ ಅಪಾರ ಬೇಡಿಕೆ ಹೆಚ್ಚಿರುತ್ತದೆ. ಆದಾಗ್ಯೂ, ಕಳೆದ 2 ವರ್ಷಗಳಲ್ಲಿ ರಾಜ್ಯದ ಖಾದಿ ಸೊಸೈಟಿಯಿಂದ ಉತ್ಪಾದನೆಯಾಗಿರುವ ರಾಷ್ಟ್ರಧ್ವಜ ಮಾರಾಟದ ಮಾಹಿತಿ ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ. ಸಂ.</th><th>ವರ್ಷ</th><th>ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>2020-21 (ಏಪ್ರಿಲ್ ನಿಂದ ಆಗಸ್ಟ್ ವರೆಗೆ)</td><td>76,94,050</td></tr>
<tr><td>2</td><td>2021-22 (ಏಪ್ರಿಲ್ ನಿಂದ ಆಗಸ್ಟ್ ವರೆಗೆ)</td><td>1,00,30,245</td></tr>
<tr><td>3</td><td>2022-23 (ಏಪ್ರಿಲ್ ನಿಂದ ಆಗಸ್ಟ್ ವರೆಗೆ)</td><td>2,13,91,740</td></tr>
</table>
ಭಾರತ ಸರ್ಕಾರದ Flag Code of India, 2002 ರ ತಿದ್ದುಪಡಿ ನಂತರವೂ ಸಹ ರಾಜ್ಯದ ರಾಷ್ಟ್ರಧ್ವಜ ಮಾರಾಟದಲ್ಲಿ ಗಮನಾರ್ಹ ಏರಿಕೆಯಾಗಿರುತ್ತದೆ.
</td></tr>
</table>

| | | |
|---|---|---|
| ಆ) | ಖಾದಿ ಗ್ರಾಮೋದ್ಯಮಗಳ ಮನವಿಗಳನ್ನು ಸರ್ಕಾರ ಪರಿಗಣಿಸದಿರಲು ಕಾರಣಗಳೇನು; ಮುಂದಿನ ದಿನಗಳಲ್ಲಿ ಈ ಲೋಪಗಳನ್ನು ಸರಿಪಡಿಸಿ ಖಾದಿಗೆ ಪ್ರಾಶಸ್ತ್ಯ ನೀಡಲಾಗುವುದೇ? | ಖಾದಿ ಗ್ರಾಮೋದ್ಯೋಗಗಳ ಮನವಿಯಲ್ಲಿನ ಆಯಾ ವಿಷಯಗಳಿಗೆ ಅನುಗುಣವಾಗಿ ಪ್ರಚಲಿತ ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲಾಗುತ್ತಿದೆ. ಈ ಕುರಿತು ಯಾವುದೇ ಲೋಪವು ಸರ್ಕಾರದಲ್ಲಿ ವರದಿಯಾಗಿರುವುದಿಲ್ಲ. |

ಸಿಐ 33 ಎಸ್‌ಎಲ್ ವಿ 2022

(ಎನ್. ನಾಗರಾಜು (ಎಂ.ಟಿ.ಬಿ.))
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.